# INAUGURATION OF NATURE CLUB ACTIVITIES FOR THE YEAR 2018-19

## 15th-Sep-2018

ಪ್ರತಿಯೊಂದು ಶಾಲಾ–ಕಾಲೇಜುಗಳಲ್ಲಿ ನೇಚರ್ ಕ್ಲಬ್ ನಂತಹ ಸಂಘಟನೆಗಳು ಇಂದಿನ ದಿನಮಾನದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ ಎಂದು ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಸಿದ್ಧರಾಮಪ್ಪ ಚಳಕಾಪುರೆರವರು ಅಭಿಪ್ರಾಯಪಟ್ಟರು. ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ನೇಚರ್ ಕ್ಲಬ್‌ನ ೨೦೧೮–೧೯ನೇ ಸಾಲಿನ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ದಿನಾಂಕ:೧೫.೦೯.೨೦೧೮ರ ಶನಿವಾರ ಶ್ರೀರಂಗಪಟ್ಟಣ ತಾಲ್ಲೂಕಿನ ವಿಶ್ವ ಪ್ರಸಿದ್ಧ ರಂಗನತಿಟ್ಟು ಪಕ್ಷಿಧಾಮದಲ್ಲಿ ಆಯೋಜಿಸಲಾಗಿತ್ತು. ಸಸಿ ನೆಟ್ಟು ನೀರೆರೆಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ ಸಂರಕ್ಷಣೆಯ ಕೆಲಸ ಕೇವಲ ವಿಜ್ಞಾನ ಓದಿದವರಿಗೆ ಸೀಮಿತ ಎಂಬ ಅಭಿಪ್ರಾವೊಂದಿತ್ತು, ಆದರೆ ನನ್ನ ಪ್ರಕಾರ ಪರಿಸರ ಸಂರಕ್ಷಣೆ ವಿಜ್ಞಾನದಂತೆ ಒಂದು ಕಲೆಯು ಹೌದು ಎಂದರು. ಪ್ರತಿಯೊಬ್ಬ ರೈತನೂ ಸಹ ಒಬ್ಬ ವಿಜ್ಞಾನಿಯಿದ್ದಂತೆ, ಋತುಗಳ ಬದಲಾವಣೆ, ಕೃಷಿ ಚಟುವಟಿಕೆ, ಬಿತ್ತನೆ ಮುಂತಾದವುಗಳ ಬಗ್ಗೆ ಜ್ಞಾನ ಹೊಂದಿರುವ ಒಬ್ಬ ಅನಕ್ಷರಸ್ಥ ರೈತನೂ ವಿಜ್ಞಾನ ಅಧ್ಯಯನ ಮಾಡಿದವರಿಗಿಂತಲೂ ಹೆಚ್ಚು ನಿಸರ್ಗವನ್ನು ಅರ್ಥೈಸಿಕೊಂಡಿದ್ದು, ಇದು ಕಲೆಯೂ ಹೌದು ಹಾಗೂ ವಿಜ್ಞಾನವೂ ಹೌದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ವಲಯ ಅರಣ್ಯಾಧಿಕಾರಿ ಶ್ರೀ ಅನನ್ಯ ಕುಮಾರ್‌ರವರು ಸೆಪ್ಟೆಂಬರ್ ೧೬ರ ವಿಶ್ವ ಓಜೋನ್ ದಿನಾಚರಣೆಯಿರುವ ಪ್ರಯುಕ್ತ ಅದರ ಸಂರಕ್ಷಣೆ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಾಜರಿದ್ದ ಮತ್ತೊಬ್ಬ ಮುಖ್ಯ ಅತಿಥಿ ಉಪವಲಯ ಅರಣ್ಯಾಧಿಕಾರಿ ಎಂ ಪುಟ್ಟಮಾದೇಗೌಡ, ಕಾಲೇಜು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಟಿ. ನಾಗರಾಜು, ಪ್ರೊ. ಹೆಚ್.ಜೆ.ಚಂದ್ರಶೇಖರ್ ಕಾರ್ಯಕ್ರಮದ ಕುರಿತು ಮಾತನಾಡಿದರು. ಕಾಲೇಜಿನ ಪ್ರಾಚಾರ್ಯರಾದ ಡಾ.ಎಸ್.ಮರೀಗೌಡರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಸ್ಥೆಯ ಗೌರವ ಕೋಶಾಧ್ಯಕ್ಷರಾದ ಶ್ರೀ.ಎಸ್.ಎನ್.ಲಕ್ಷ್ಮೀನಾರಾಯಣರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ನೇಚರ್ ಕ್ಲಬ್ ಸಂಯೋಜನಾಧಿಕಾರಿ ಪ್ರೊ. ಎನ್. ಮೋಹನ್‌ಕುಮಾರ್ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರೆ, ಡಾ.ಆರ್.ಲತಾಮಣಿ ವಂದಿಸಿದರು. ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರರು ಹಾಗೂ ೭೦ಕ್ಕೂ ಹೆಚ್ಚು ನೇಚರ್ ಕ್ಲಬ್‌ನ ಸ್ವಯಂ ಸೇವಕರು ಕಾರ್ಯಕ್ರಮದಲ್ಲಿ ಹಾಜರಿದ್ದರು.



















Vidyavardhaka First Grade College, Mysuru – Events, Special Talks, Seminars and Activities page

















Vidyavardhaka First Grade College, Mysuru – Events, Special Talks, Seminars and Activities page





















Vidyavardhaka First Grade College, Mysuru – Events, Special Talks, Seminars and Activities page
























ವಿಶ್ವ ಓಝೋನ್ ದಿನಾಚರಣೆ










ವಿಶ್ವ ಆನೆ ದಿನಾಚರಣೆ


ವಿಶ್ವ ಆನೆ ದಿನಾಚರಣೆ






ವಿಶ್ವ ಆನೆ ದಿನಾಚರಣೆ
WORLD elephant DAY

